# ಅಧಿಕಾರ– ಅಹಂ

ಪಂಪ ಕನ್ನಡದ ಆದಿ ಕವಿಯೆಂದು ಕರೆಸಿಕೊಂಡವನು. ತನ್ನ ಅಮೂಲ್ಯ ಕೃತಿಗಳನ್ನು ಕನ್ನಡ ಕಾವ್ಯಮಾರ್ಗಕ್ಕೆ ಕೊಟ್ಟವನು. ಅವನು ಬರೆದ ಆದಿಪುರಾಣ ಹಲವು ಕಾರಣಗಳಿಂದಾಗಿ ವಿಶಿಷ್ಟವಾದುದು. ಜೈನ ಧರ್ಮದ ಘನತೆವೆತ್ತ ಕೃತಿಯಾದ ಇದರಲ್ಲಿ ಪಂಪ ಜೈನ ಧರ್ಮವನ್ನು, ಕಾವ್ಯಧರ್ಮವನ್ನು ಮೇಳೈಯಿಸಿದ್ದಾನೆ. ಆದಿಪುರಾಣ ಹಲವು ಕಾರಣಗಳಿಂದಾಗಿ ಮತ್ತೆ ಮತ್ತೆ ಓದಿಸಿಕೊಳ್ಳುವ ಕಾವ್ಯವಾಗಿದೆ. ಓದುಗರ ದೃಷ್ಟಿಗನುಸಾರವಾಗಿ ಕಾವ್ಯಧರ್ಮವನ್ನು ಈ ಕಾವ್ಯ ಬಿಚ್ಚಿತೋರುತ್ತದೆ. ಪಂಪ ಹೇಳುವಂತೆ ತ್ಯಾಗ, ಭೋಗ, ಸಾಹಿತ್ಯ, ಸಂಗೀತ, ಸರಸ ಪ್ರಸಂಗ ಬಯಸುವ ಸಹೃದಯರಿಗೆ ಕಾವ್ಯ ಒದಗಿಸಿಕೊಡುವ ಕೆಲಸ ಮಾಡುತ್ತದೆ. ಯೋಗಿಯಾಗಲು ಹೊರಟ ದಿವ್ಯಜೀವಿಗಳು ಭೋಗವೆಂಬ ನಿಕಷದೊಳಗಿನಿಂದಲೇ ಹಾಯ್ದು ಹೊರಹೋಗಲೇಬೇಕಾದದ್ದು ಜೀವನ ಧರ್ಮವಾಗಿದೆ.

ಬದುಕು ಬೇರೆಯಲ್ಲ, ಸಾಹಿತ್ಯ ಬೇರೆಯಲ್ಲ. ಸಾಹಿತ್ಯ ಜೀವನದ ಪ್ರತಿಬಿಂಬ ಎಂದೇ ಹೇಳಲಾಗುತ್ತದೆ. ಸಾಹಿತ್ಯ ಕೃತಿಗಳು ಆಯಾ ಕಾಲಘಟ್ಟದ ಜೀವನವನ್ನು ಬಿಂಬಿಸುತ್ತವೆ. ಅಧಿಕಾರದ ಮದವಿದ್ದಲ್ಲಿ ತನ್ನ ಎದುರಿನವರ ಸತ್ಯಾಸತ್ಯತೆಗಳು, ಸರಳ ನಡವಳಿಕೆಗಳು ದೌರ್ಬಲ್ಯದ ರೂಪಗಳೆನಿಸಿಕೊಳ್ಳುತ್ತವೆ. ಅಧಿಕಾರ ಇರುವುದೇ ತನ್ನ ಎದುರಿನ ಜಗತ್ತನ್ನು ನುಂಗಿ ನೊಣೆಯಲು ಎಂಬಂತಹ ಅಹಂಕಾರ ಮೂಡುತ್ತದೆ. ಅಧಿಕಾರದ ಜೊತೆಗೆ ಮಾನವೀಯತೆ ಇದ್ದಾಗ ಪ್ರಮಾದವಾಗುವುದಿಲ್ಲ. ಅಧಿಕಾರ, ಅಹಂಕಾರ ಕೂಡಿದರೆ ವಿವೇಚನೆ ಮರೆಯಾಗುತ್ತದೆ. ಸಲ್ಲದ ಸಂಗತಿಗಳು ಸಂದು ಹೋಗುತ್ತವೆ.

ಪುರುದೇವನ ಮಗನಾದ ಭರತನ ಆಯುಧಾಗಾರದಲ್ಲಿ ಚಕ್ರರತ್ನವೊಂದು ಹುಟ್ಟುತ್ತದೆ. ಕ್ಷತ್ರಿಯ ಸಹಜವಾದ ಬಲದೊಂದಿಗೆ ಚಕ್ರರತ್ನದ ಬಲವೂ ಸೇರಿ ಭರತ ದಿಗ್ವಿಜಯಕ್ಕೆ ಹೊರಡುತ್ತಾನೆ. ತನ್ನ ಪರ್ಯಟನೆಯ ಕಾಲದಲ್ಲಿ ರಾಜಾಧಿರಾಜರನ್ನು ಗೆಲ್ಲುತ್ತಾ ಹೋಗುತ್ತಾನೆ. ಹಿಮಪರ್ವತಗಳಿಂದ ಕೂಡಿದ ಹಿಮಾಚಲ ಪ್ರದೇಶದ ಕಡೆಗೆ ಅವನ ದಿಗ್ವಿಜಯ ಸಾಗುತ್ತದೆ. ಹಿಮಾಚಲ ಪ್ರದೇಶದ ನಡುವಿನಲ್ಲಿದ್ದ ಎತ್ತರದ ಶಿಖರದಂತಿರುವ ವೃಷಭಾಚಲವನ್ನು ಭರತ ಕಾಣುತ್ತಾನೆ. ಬೃಹತ್ತಾದ ಆ ಶಿಲಾಭಾಗದ ಎದುರು ಕುಬ್ಜನಾಗುವ ಚಕ್ರವರ್ತಿಯ ಭ್ರಮನಿರಸನವನ್ನು ಪಂಪ ಸೊಗಸಾಗಿ ಚಿತ್ರಿಸುತ್ತಾನೆ. ಆ ವೃಷಭಾಚಲದ ಮಧ್ಯೆದಲ್ಲಿ ತನ್ನೆಲ್ಲಾ ಭೂದಿಗ್ವಿಜಯದ ವಿವರವನ್ನು ಕೆತ್ತಿಸಬೇಕು ಎಂದು ಆಲೋಚಿಸುತ್ತಾನೆ. ಚಕ್ರವರ್ತಿಯ ಅಹಂನಲ್ಲಿ ಹುಡುಕಿದರೂ ತನ್ನ ಹೆಸರು ಬರೆಯಲು ಅಲ್ಲಿ ಜಾಗವಿಲ್ಲ. ತನಗಿಂತಲೂ ಹಿಂದೆ ಆಗಿಹೋದ ಚಕ್ರವರ್ತಿಗಳ ಛಲ, ಪರಾಕ್ರಮ, ತ್ಯಾಗ ಹಾಗೂ ಧರ್ಮ ಕುರಿತಾದ ಮಾತುಗಳೇ ಅಲ್ಲಿ ತುಂಬಿ ಹೋಗಿವೆ. ಆ ಕ್ಷಣದಲ್ಲಿ ಭರತನ ಗರ್ವರಸ ಕರಗಿ ನೀರಾಗಿ ಹರಿಯುತ್ತದೆ. ಚಕ್ರವರ್ತಿಯಾದರೂ ಅವನು ಸಹ ಮಾನವನೇ ಸರಿ. ಹೀಗಾಗಿ ತನ್ನ ದಂಡರತ್ನದಿಂದ ಅವುಗಳನ್ನು ಒರೆಸಿಹಾಕಿ ತನ್ನ ಪ್ರಶಸ್ತಿಗಳನ್ನು ಬರೆಸುತ್ತಾನೆ. ತನ್ನ ಕುಲ, ಪರಾಕ್ರಮ, ಸಾಧನೆಗಳೆಲ್ಲವನ್ನು ಬರೆಯಿಸಿ ಸಮಾಧಾನ ಹೊಂದುತ್ತಾನೆ.

ಭರತನ ಪಾಲಿಗೆ ಭಾಗ್ಯಲಕ್ಷ್ಮಿಯಂತೆ, ರಾಜ್ಯಲಕ್ಷ್ಮಿಯಂತೆ ಒದಗಿ ಬಂದ ಅಧಿಕಾರದ ಸಂಕೇತವಾದ ಚಕ್ರರತ್ನ ಹಲವು ಕಡೆ ಅವನನ್ನು ಪರೀಕ್ಷಿಸುತ್ತದೆ. ಅವನನ್ನು ಸರಿದಾರಿಗೆ ಹಚ್ಚುತ್ತದೆ. ಅಧಿಕಾರವಿರುವುದು ಕೇವಲ ಆಳ್ವಿಕೆಗಲ್ಲ. ಅದು ಜನಾಧಿಕಾರವನ್ನು ನುಂಗಿ ನೊಣೆಯುವುದಕ್ಕಲ್ಲ. ಅಧಿಕಾರ ಸರಿಯಾದ ದಾರಿಯಲ್ಲಿ ವಿನಿಯೋಗವಾಗದಿದ್ದರೆ, ಸರ್ವಾಧಿಕಾರಿಯಂತೆ ನಡೆದರೆ ವಿನಾಶ ತಪ್ಪಿದ್ದಲ್ಲ. ಭ್ರಮನಿರಸನ ತಪ್ಪಿದ್ದಲ್ಲ ಎಂಬ ಹಲವು ಸತ್ಯಗಳನ್ನು ಚಕ್ರರತ್ನದ ಮೂಲಕ ಹೇಳಲು ಪಂಪ ಪ್ರಯತ್ನಿಸುತ್ತಾನೆ.

ದಿಗ್ವಿಜಯದ ನಂತರ ಪುರಪ್ರವೇಶಕ್ಕಾಗಿ ಆಯೋಧ್ಯಾನಗರಕ್ಕೆ ಬಂದಾಗ ಚಕ್ರರತ್ನ ಪ್ರವೇಶ ಮಾಡದೆ ತಟಸ್ಥವಾಗಿಬಿಡುತ್ತದೆ. ಈ ಬಗ್ಗೆ ಕೇಳಲಾಗಿ ನಿನ್ನ ತಮ್ಮಂದಿರಾದ ಬಾಹುಬಲಿ ಮತ್ತು ಇತರರನ್ನು ನೀನು ಗೆಲ್ಲದ ಕಾರಣ ಗೆಲುವು ಸಂಪೂರ್ಣವಲ್ಲವೆಂದು ಹೇಳುತ್ತಾನೆ. ಇದು ಪಂಪ ಚಿತ್ರಿಸುವ ಭರತನ ಅಧಿಕಾರದ ಅಹಂ ಸೋರಿಹೋಗುವ ಎರಡನೇ ಪ್ರಸಂಗ. ಬಾಹುಬಲಿಗೆ ತನಗೆ ಎರಗಿ ಅಧೀನನಾಗುವಂತೆ ಹೇಳಿ ಕಳಿಸಿದಾಗ ಅವನು ತಿರಸ್ಕರಿಸುತ್ತಾನೆ. ಇತರ ತಮ್ಮಂದಿರು ಎರಗುವುದಾದರೆ ಜಿನದೇವನಿಗೆ ಮಾತ್ರ ಎಂದು ತಪಸ್ಸನ್ನು ಆರಿಸಿಕೊಂಡರೆ, ಬಾಹುಬಲಿ ಯುದ್ಧವನ್ನೇ ಆರಿಸಿಕೊಳ್ಳುತ್ತಾನೆ. ಅಣ್ಣನಿಗೆ ಎರಗುವುದು ಅವಮಾನವಲ್ಲ. ನೆತ್ತಿಯ ಕತ್ತಿ ಊರಿ ಎರಗಿಸಲು ಹೊರಟಿರುವುದು ಸರ್ವಾಧಿಕಾರ. ತಾನು ಎರಗಲಾರೆ ಎಂದು ನಿರ್ಧರಿಸುತ್ತಾನೆ. ಎರಡೂ ಪಕ್ಷದ ಮಂತ್ರಿ ಜನರು ಸಮಾಲೋಚಿಸಿ ಯುದ್ಧದಿಂದಾಗುವ ಪ್ರಾಣಹಾನಿಯ ಬಗ್ಗೆ ಯೋಚಿಸಿ ಭರತ–ಬಾಹುಬಲಿ ಇಬ್ಬರಿಗೂ ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧ ಮಾಡುವಂತೆ ಸೂಚಿಸುತ್ತಾರೆ. ಮಾನಸಿಕವಾಗಿ ದೈಹಿಕವಾಗಿ ದೃಢವಾಗಿದ್ದ ಬಾಹುಬಲಿ ಸಹಜವಾಗಿಯೇ ಗೆಲ್ಲುತ್ತಾನೆ, ಭರತ ಸೋಲುತ್ತಾನೆ.

ಎರಡೂ ಪಕ್ಷದ ಎದುರು ತನ್ನ ಚಕ್ರವರ್ತಿತನಕ್ಕೆ ಆದ ಸೋಲನ್ನು ಒಪ್ಪಿಕೊಳ್ಳಲಾರದೆ ಭರತ ಬಾಹುಬಲಿಯ ಮೇಲೆ ಚಕ್ರರತ್ನ ಪ್ರಯೋಗಿಸುತ್ತಾನೆ. ಚಕ್ರರತ್ನವು ಬಾಹುಬಲಿಯ ಬಳಿ ಹೋಗಿ ಅವನಿಗೆ ಪ್ರದಕ್ಷಿಣೆ ಮಾಡಿ ಬಲಭುಜದ ಬದಿಯಲ್ಲಿ ಸುಮ್ಮನೆ ನಿಂತು ಬಿಡುತ್ತದೆ. ವಿವೇಕ ಕೈಕೊಟ್ಟಾಗ ಅಧಿಕಾರವೂ ಪ್ರಯೋಜನಕ್ಕೆ ಬಾರದು ಎಂಬಂತೆ ಭರತ ನಾಚಿಕೆಯಿಂದ ತಲೆತಗ್ಗಿಸುತ್ತಾನೆ. ಬಾಹುಬಲಿ ತಲೆತಗ್ಗಿಸಿದ ಭರತನನ್ನು, ತನಗೆ ತಲೆಬಾಗಿನಿಂತ ಚಕ್ರವನ್ನು ಗಮನಿಸುತ್ತಾನೆ. ಅನುಭವಿಸಿದಷ್ಟೂ ಕೆರಳುವ ಐಹಿಕ ಭೋಗಗಳಿಗೆ ನಿಲುಗಡೆಯೆಂಬುದಿಲ್ಲ. ಆರಂಭದಲ್ಲಿ ಸಿಹಿಯಾಗಿಯೂ ಆನಂತರ ವಿಷವಾಗಿಯೂ ಅಧಿಕಾರವೆಂಬ ಭೋಗ ಬಿಡದೆ ಕೊಲ್ಲುತ್ತದೆ. ಈಗಲೇ ಜೈನದೀಕ್ಷೆಯನ್ನು ಪಡೆದು ದೇವ ಸಮೂಹವನ್ನು ಕಾಲಿಗೆ ಬೀಳುವಂತೆ ಮಾಡುವೆ ಎಂದು ತಪಸ್ಸಿಗೆ ತೊಡಗುತ್ತಾನೆ. ಮುಂದೆ ವೈರಾಗ್ಯ ಮೂರ್ತಿಯಾಗಿ ಜಿನರಿಂದ ಆರಾಧಿಸಲ್ಪಡುತ್ತಾನೆ. ಇದು ಅಧಿಕಾರ ಮತ್ತು ಅಹಂಗಳ ನಡುವೆ ನಡೆದ ಯುದ್ಧದಲ್ಲಿ ಲೋಕೋತ್ತರ ಮಾದರಿಯಾಗಿ ನಿಂತ ಬಾಹುಬಲಿಯ ಕಥೆ.

■ **ಅಮೃತಮತಿ**

## ಮಾತೇ ಮುತ್ತು

- ಭೂಮಿ ಸಕಲ ಜೀವಿಗಳಿಗೂ ಆಶ್ರಯ ನೀಡಿದೆ. ಅದರ ಆರೋಗ್ಯವನ್ನು ಕಾಪಾಡುವ ಹೊಣೆ ನಮ್ಮದಾಗಬೇಕು.
  —ಚಾರ್ಲ್ಸ್ ಎ. ಲಿಂಡ್‌ಬರ್ಗ್
- ಬೇರೆಯವರು ತುಳಿದ ಹಾದಿಯಲ್ಲಿ ನೀವೂ ಹೋದರೆ ಏನು ಸಾಧಿಸಿದಂತಾಗುತ್ತದೆ? ಭಿನ್ನ ಹಾದಿ ತುಳಿಯಿರಿ. ಅಲ್ಲಿ ನಿಮಗೆ ಹೊಸ ಅನುಭವ, ಸಾಹಸ, ರೋಮಾಂಚನ ಸಿಗುತ್ತವೆ.
  —ನೆಪೋಲಿಯನ್
- ಆಸೆ, ಮನುಷ್ಯ ಜೀವನದ ಲಂಗರು ಇದ್ದಂತೆ. ಅದರ ಸಹಾಯವಿಲ್ಲದೆ ಮನುಷ್ಯ ಭವಸಾಗರವನ್ನು ದಾಟಲಾರ.
  —ಟಾಲ್‌ಸ್ಟಾಯ್
- ಒಡಲೆಂಬ ಹುತ್ತಕ್ಕೆ ನಾಲಿಗೆ ಸರ್ಪ.
  —ಸರ್ವಜ್ಞ
- ವ್ಯಕ್ತಿತ್ವ ಸಾಧನೆ ಹೊಸಯುಗದ ಬೀಜಮಂತ್ರ.
  —ರಂ.ಶ್ರೀ. ಮುಗಳಿ
- ನಾವು ನಮ್ಮನ್ನೇ ಅಲಕ್ಷಿಸದಿರುವುದು ನಮ್ಮ ಮೊದಲ ಕರ್ತವ್ಯ.
  —ಸ್ವಾಮಿ ವಿವೇಕಾನಂದ
- ಮನುಷ್ಯನ ಬೆಳವಣಿಗೆಗೆ ಬೇಕಾದಷ್ಟು ಮಾತ್ರ ಸ್ವಾರ್ಥವು ಅವನಲ್ಲಿ ಇರಬೇಕು. ಆದರೆ, ಅದು ಮಿತಿಮೀರಬಾರದು.
  —ಶಿವರಾಮ ಕಾರಂತ
- ಬೆಳೆದರೆ ಬಾಳು, ಬೆಳೆಯದಿದ್ದರೆ ಹಾಳು.
  —ಜಿ.ಪಿ. ರಾಜರತ್ನಂ